ಶಿಕ್ಷಣ | ವಿದ್ಯಾರ್ಥಿಗಳಿಗೆ ನಾಯಕತ್ವ ಶಿಬಿರ | ಶೈಕ್ಷಣಿಕವಾಗಿಯೇ ನಾಯಕತ್ವ ರೂಢಿಸಿ: ವಿಜಯ್ ವಿಷ್ಣು 2

ಉದಯವಾಣಿ ಸುದಿನ
ಸಮೃದ್ಧ ಜನಜೀವನದ ಮುನ್ನುಡಿ
SUDINA MANGALURU

ಕೃಷಿ
ಪಡುಪೆರಾರ: ಕೃಷಿ ಮಾಹಿತಿ ಕಾರ್ಯಾಗಾರ 3

ಲೇಖನ ಮಾಲೆ
ಪರಿಸರ ಸ್ನೇಹಿ ಗಣಪನ ಆರಾಧನೆ ಪರಮಪಾವನ 4

GM

ಗಣೇಶ ದೇವತೆಗಳಲ್ಲೇ ಪ್ರಥಮ ಪೂಜೆ. ಆಗಮಿಸುತ್ತಿರುವ ಚತುರ್ಥಿಗೆ ಪೂರಕವಾಗಿ ಸುದಿನದ ವಿಶೇಷ ಲೇಖನ ಮಾಲೆ ಇಂದಿನಿಂದ ಆರಂಭ ಪುಟ 4

ಆಹ್ವಾನ ಪತ್ರಿಕೆಗಳನ್ನು ಕಳಿಸಿ

ಪತ್ರಿಕೆಯ ಇಂದಿನ ಕಾರ್ಯಕ್ರಮ ಅಂಕಣದಲ್ಲಿ ಪ್ರಕಟಿಸಲು ನಿಮ್ಮ ಕಾರ್ಯಕ್ರಮದ ಆಮ್ಂತ್ರಣ ಪತ್ರಿಕೆಗಳನ್ನು ನಮ್ಮ ಕಚೇರಿಗೆ ಅಥವಾ ಇಮೇಲ್‌ಗೆ ಕಳಿಸಿಕೊಡಿ.
ಉದಯವಾಣಿ, ಮಂಗಳೂರು ಕಚೇರಿ, ಮೂಸನ ಟವರ್ಸ್ ಎಂ.ಜಿ. ರಸ್ತೆ, ಮಂಗಳೂರು
news_mlr@manipalmedia.com

ಪ್ರಮುಖ NEWS

ಇಂದು ವಿದ್ಯುತ್ ನಿಲುಗಡೆ

ಕುಳ್ಳ ಮಣ್ಣಗುಡ್ಡ 33/11 ಕೆವಿ ಉಪಕೇಂದ್ರದಿಂದ ಹೊರಡುವ 11 ಕೆವಿ ಫಾಟರ್ ಸಫ್ಲೈ ಫೀಡರ್‌ನಲ್ಲಿ ಕಂಬ ಬದಲಾವಣೆ ಮತ್ತು ಲೈನ್ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಆ. 30ರಂದು ಬೆಳಗ್ಗೆ 10ರಿಂದ ಸಂಜೆ 5.30 ಗಂಟೆಯವರೆಗೆ ಉರ್ವ, ಮಾರಿಗುಡಿ, ಹೊಯಿಗೆಬೈಲ್, ಧೈವಜ್ಞ, ಕಲ್ಯಾಣ ಮಂಟಪ, ಆಶೋಕನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಸೆ. 16ರಂದು ಶೋಭಾಯಾತ್ರೆ ರದ್ದು

ಕುಳ್ಳ ಬ್ರಹ್ಮಶ್ರೀ ನಾರಾಯಣ ಗುರುಗಳ 162ನೇ ಜನ್ಮದಿನೋತ್ಸವದ ಪ್ರಯುಕ್ತ ಸೆ. 16ರಂದು ಶ್ರೀ ಗೋಕರ್ಣನಾಥೇಶ್ವರ ಕಾಲೇಜಿನಿಂದ ಶ್ರೀ ಕ್ಷೇತ್ರ ಕುಮ್ರೋಳಿ ಯವರೆಗೆ ಆಯೋಜಿಸಲಾಗುವ ಶೋಭಾಯಾತ್ರೆಯನ್ನು ಈ ಬಾರಿ ರದ್ದುಮಾಡಲಾಗಿರುವ ಹಿನ್ನೆಲೆಯಲ್ಲಿ ರದ್ದುಗೊಳಿಸ ಲಾಗಿದೆ ಎಂದು ಕಾಲೇಜಿನ ಸಂಚಾಲಕ ಎಸ್.ಜಯವಿಠ್ಠಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಲಸೌಕರ್ಯ | ಹಳೆಯಂಗಡಿ ಶಾಖಾಧಿಕಾರಿ ನೇಮಕ ವಿಳಂಬ

ಮೆಸ್ಕಾಂ ಕಚೇರಿಗೆ ಉದ್ಘಾಟನೆ ಭಾಗ್ಯವಿಲ್ಲ

- ಸೌಲಭ್ಯಕ್ಕೆ ಅನಗತ್ಯ ವಿಳಂಬ
- ಸೆಕ್ಷನ್ ಕಚೇರಿ ಮೇಲ್ದರ್ಜೆಗೆ
- ಗ್ರಾಹಕರಿಂದ ಅಸಮಾಧಾನ

□ನರೇಂದ್ರ ಕೆರೆಕಾಡು

ಹಳೆಯಂಗಡಿ, ಆ. 29: ಮೆಸ್ಕಾಂ ಇಲಾಖೆಯು ಇಲ್ಲಿಯ ಕಚೇರಿಯನ್ನು ಸೆಕ್ಷನ್ ಕಚೇರಿಯನ್ನಾಗಿಸಿದ್ದರೂ ಶಾಖಾಧಿಕಾರಿಯನ್ನು ಇನ್ನೂ ನೇಮಿಸಿಲ್ಲ. ಈ ಹಿನ್ನೆಲೆಯಲ್ಲಿ ಕಚೇರಿ ಉದ್ಘಾಟನೆಗೂ ಳದೇ ಗ್ರಾಹಕರಿಗೆ ಸೌಲಭ್ಯ ಸಿಗುವಲ್ಲಿ ಅನಗತ್ಯ ವಿಳಂಬವಾಗುತ್ತಿದೆ.

ಮೂಲ್ಕಿ ಕಿನ್ನಿಗೋಳಿ ಮತ್ತು ಹಳೆಯಂಗಡಿ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಬೇಡಿಕೆಯಂತೆ ಮೂಲ್ಕಿ ಸೆಕ್ಷನ್ ಕಚೇರಿಯನ್ನು ಮೇಲ್ದರ್ಜೆಗೇರಿಸಲಾಗಿತ್ತು. ಇದರ ವ್ಯಾಪ್ತಿಗೆ ಕಿನ್ನಿಗೋಳಿ, ಮೂಲ್ಕಿ ಸೇರಿತ್ತು. ಜತೆಗೆ ಹೊಸದಾಗಿ ಹಳೆಯಂಗಡಿಯನ್ನು ಸೆಕ್ಷನ್ ಕಚೇರಿಯನ್ನಾಗಿಸಿ ಆದೇಶಿಸಿದ್ದರು.

ಈ ಹಿನ್ನೆಲೆಯಲ್ಲಿ ರೈಲ್ವೆ ಗೇಟ್ ಬಳಿಯ ಲೈಟ್‌ಹೌಸ್‌ನ ಪಂಚಾಯತ್ ಕಟ್ಟಡವನ್ನು ನೀಡಿದ್ದು ಸೆಕ್ಷನ್ ಕಚೇರಿಗೆ ಬಳಸಿಕೊಳ್ಳಲಾಗುತ್ತಿದೆ. ಶಾಖಾಧಿಕಾರಿಯ ನೇಮಕವಾಗದ ದ್ದರೂ, ಹತ್ತು ಮಂದಿ ಸಿಬಂದಿಗಳು ಈಗಾಗಲೇ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.

ಗ್ರಾಹಕರ ಸಂಪರ್ಕ ಸಂಖ್ಯೆ 8 ಸಾವಿರಕ್ಕಿಂತ ಹೆಚ್ಚಿದ್ದರೆ, ಅಲ್ಲಿ ಸೆಕ್ಷನ್ ಕಚೇರಿಯನ್ನು ಸ್ಥಾಪಿಸಲುಹುದಾಗಿದೆ.

ಉದ್ಘಾಟನೆಗೆ ಕಾದು ನಿಂತಿರುವ ಮೆಸ್ಕಾಂ ಕಚೇರಿ.

ಸುದಿನ SPECIAL

ಅದರಂತೆ ಮೂಲ್ಕಿಯಲ್ಲಿ 14,800, ಕಿನ್ನಿಗೋಳಿಯಲ್ಲಿ 14 ಸಾವಿರ, ಹಳೆಯಂಗಡಿಯಲ್ಲಿ 6 ಸಾವಿರ ಸಂಪರ್ಕ ಕಲ್ಪಿಸಲಾಗಿದೆ. ಹಾಗಾಗಿ ಈ ಮೂರೂ ಸೆಕ್ಷನ್‌ಗಳನ್ನು ಸೇರಿಸಿ ಒಂದು ಡಿವಿಜನ್ ಕಚೇರಿಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಜತೆಗೆ ಹಳೆಯಂಗಡಿಯನ್ನು ಹೊಸದಾಗಿ ಸೆಕ್ಷನ್ ಕಚೇರಿಯಾಗಿ ಪರಿವರ್ತಿಸಲಾಗಿದೆ. ಮೂಲ್ಕಿ ಸಬ್ ಡಿವಿಜನ್‌ಗೆ ಹೊಸದಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರಾಗಿ ರಾಮಕೃಷ್ಣ ಬಾಳಾರನ್ನು ನೇಮಿಸಲಾಗಿದೆ. ಆದರೆ ಹಳೆಯಂಗಡಿಗೆ ಅಧಿಕಾರಿಯನ್ನು ನೇಮಿ ಸದಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದೆ.

ಗ್ರಾಹಕರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲು ಸಂಪೂರ್ಣವಾಗಿ ಶಾಖಾ ಕಚೇರಿ ಪ್ರಾರಂಭವಾದರೆ ಮಾತ್ರ ಸಾಧ್ಯ ಎಂಬುದು ಗ್ರಾಹಕರ ಹೇಳಿಕೆ.

'ಉದಯವಾಣಿ'ಗೆ ಸಿಕ್ಕ ಮಾಹಿತಿ

> ಇಲಾಖೆ ಶೀಘ್ರ ಸಂದಿಸಬೇಕು
>
> ಮೆಸ್ಕಾಂ ಶಾಖೆಯು ಎ. 1ರಂದೇ ಆರಂಭವಾಗಬೇಕಿತ್ತು. ಆದರೆ ರಾಜ್ಯ, ಜಿಲ್ಲೆಯಲ್ಲಿ ಪ್ರಭಾರ ಹುದ್ದೆಯಲ್ಲಿ ಶಾಖಾಧಿಕಾರಿಗಳಿದ್ದರೂ, ಹಳೆಯಂಗಡಿಗೆ ಯಾಕೆ ನೇಮಿಸಿಲ್ಲ ಎಂಬುದ ತಿಳಿದಿಲ್ಲ. ಈ ಬಗ್ಗೆ ಶಾಸಕ ಅಭಯಚಂದ್ರ ಜೈನ್‌ರಿಗೆ ಮಾಹಿತಿ ನೀಡಲಾಗಿದೆ. ಶೀಘ್ರವಾಗಿ ಗ್ರಾಹಕರಿಗೆ ಅನುಕೂಲವಾಗಲು ಇಲಾಖೆ ಸ್ಪಂದಿಸಬೇಕು .
>
> **-ಜಲಜಾ**
> ಅಧ್ಯಕ್ಷರು, ಹಳೆಯಂಗಡಿ ಗ್ರಾ.ಪಂ.

ವ್ಯಾಪ್ತಿ ವಿವರ
ಹಳೆಯಂಗಡಿ ವ್ಯಾಪ್ತಿಗೆ ಎಂಆರ್‌ಪಿಎಲ್ ಕಾಲೋನಿ, ತೋಕೂರು, ಪಂಜ, ಮಾಗಂದಡಿ, ಇಂದಿರಾನಗರ, ಕಲ್ಲಾಪು, ಪಡುಪಣಂಬೂರು, ಕುಳೆ, ಪಾವಂಜೆ ಗ್ರಾಮಗಳು ಸೇರಿದೆ.

> ಎಲ್ಲ ರೀತಿಯಲ್ಲೂ ಸಜ್ಜಾಗಿದೆ
>
> ಮೂಲ್ಕಿ ಸಬ್‌ಡಿವಿಜನ್‌ಗೆ ಸೇರುವ ಹಳೆಯಂಗಡಿ ಮೆಸ್ಕಾಂ ಶಾಖೆಗೆ ಅಧಿಕಾರಿಯನ್ನು ನೇಮಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇಲಾಖೆಯಲ್ಲಿನ ಹಿರಿಯ ಸಿಬಂದಿಗಳಿಗೆ ಪದೋನ್ನತಿ ಅಥವಾ ಹೊಸಬರನ್ನೇ ನೇಮಿಸುವ ಸಂಭವವಿದೆ. ಈಗಾಗಲೇ ಕಚೇರಿಯನ್ನು ಎಲ್ಲಾ ರೀತಿಯಲ್ಲೂ ಸಜ್ಜುಗೊಳಿಸಲಾಗಿದೆ. ಕಂಪ್ಯೂಟರ್ ಇನ್ನಿತರ ವ್ಯವಸ್ಥೆಯನ್ನು ಸಹ ಏಕಕಾಲಕ್ಕೆ ಮಾಡಬಹುದು.
>
> **-ರಾಮಕೃಷ್ಣ ಬಿತಾಳ್**
> ಎಇಇ, ಮೂಲ್ಕಿ ಸಬ್‌ಡಿವಿಜನ್ ಕಚೇರಿ,

ಪ್ರಕಾರ ಮಾರ್ಚ್ ನಲ್ಲಿ ಶಾಖಾಧಿಕಾರಿಗಳ ಹುದ್ದೆಗಾಗಿ ಪರೀಕ್ಷೆ ನಡೆಸಲು ಸಿದ್ಧತೆ ನಡೆದಿದ್ದು, ಕೊನೆ ಹಂತದಲ್ಲಿ ರದ್ದಾಯಿತು. ಮತ್ತೆ ಆ ಪ್ರಕ್ರಿಯೆ ಆರಂಭವಾಗಿಲ್ಲ. ಇದರೊಂದಿಗೆ ಬೇರೆ ಶಾಖಾಧಿಕಾರಿಗಳೂ ಅನ್ಯ ಶಾಖೆಯ ಪ್ರಭಾರ ಹೊಣೆಹೊರಲುನಿರಾಕರಿಸುತ್ತಿರುವುದೂ ನೇಮಕ ವಿಳಂಬಕ್ಕೆ ಕಾರಣ ಎನ್ನಲಾಗಿದೆ.

> ಎಲ್ಲ ರೀತಿಯಲ್ಲೂ ಸಜ್ಜಾಗಿದೆ
>
> ಮೂಲ್ಕಿ ಸಬ್‌ಡಿವಿಜನ್‌ಗೆ ಸೇರುವ ಹಳೆಯಂಗಡಿ ಮೆಸ್ಕಾಂ ಶಾಖೆಗೆ ಅಧಿಕಾರಿಯನ್ನು ನೇಮಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇಲಾಖೆಯಲ್ಲಿನ ಹಿರಿಯ ಸಿಬಂದಿಗಳಿಗೆ ಪದೋನ್ನತಿ ಅಥವಾ ಹೊಸಬರನ್ನೇ ನೇಮಿಸುವ ಸಂಭವವಿದೆ. ಈಗಾಗಲೇ ಕಚೇರಿಯನ್ನು ಎಲ್ಲಾ ರೀತಿಯಲ್ಲೂ ಸಜ್ಜುಗೊಳಿಸಲಾಗಿದೆ. ಕಂಪ್ಯೂಟರ್ ಇನ್ನಿತರ ವ್ಯವಸ್ಥೆಯನ್ನು ಸಹ ಏಕಕಾಲಕ್ಕೆ ಮಾಡಬಹುದು.
>
> **-ರಾಮಕೃಷ್ಣ ಬಿತಾಳ್**
> ಎಇಇ, ಮೂಲ್ಕಿ ಸಬ್‌ಡಿವಿಜನ್ ಕಚೇರಿ,

ದೌರ್ಜನ್ಯ ಆರೋಪ: ಮಹಿಳಾ ಸಿಬಂದಿ ಪ್ರತಿಭಟನೆ

▶▶ ಮಂಗಳೂರು ವನ್ ಕೇಂದ್ರದ ಅಧಿಕಾರಿಗಳಿಂದ ಕಿರುಕುಳದ ಹಿನ್ನೆಲೆ

- ಹಲವು ವರ್ಷಗಳಿಂದ ತೊಂದರೆ
- ಏಕಾಏಕಿ ಕೆಲಸದ ಅವಧಿ ಏರಿಕೆ
- ಹಿರಿಯ ಸಿಬಂದಿಗೂ ಬಿಟ್ಟಿಲ್ಲ

ಕುಳ್ಳ, ಆ. 29: ಸರಕಾರದ ಇ-ಗವರ್ನೆನ್ಸ್ ವ್ಯಾಪ್ತಿಯ ಮಂಗಳೂರು ವನ್ ಕೇಂದ್ರದ ಸಿಂಎಸ್ ಕಂಪ್ಯೂಟರ್ಸ್ ಅಧಿಕಾರಿಗಳು ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ತಮ್ಮ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಮಹಿಳಾ ಸಿಬಂದಿ ಸೋಮವಾರ ಕದ್ರಿ ಮಂಗಳೂರು-ವನ್ ಕಚೇರಿ ಮುಂಭಾಗದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಕದ್ರಿ ವಲಯದಲ್ಲಿ ಮ್ಯಾನೇಜರ್ ಆಗಿ ಡುತಿಯುತ್ತಿದ್ದ ನಳಿನಾಕ್ಷಿ ಅವರನ್ನು ವಿನಾಕಾರಣ ಅಮಾನತು ಮಾಡಲಾಗಿದ್ದು ಸೆಂಟರ್ ಮ್ಯಾನೇಜರ್ ರಮ್ಯಾ ಅರ್ಚನಾ ಅವರನ್ನು ಬ್ಯಾಟರಿ ಕೋಣೆಯಲ್ಲಿ ಕುಳ್ಳಿರಿಸಲಾಗಿದೆ. ಪಾಳಿಯಲ್ಲಿ ನಡೆಯುತ್ತಿದ್ದ ಕೆಲಸದ ಅವಧಿಯನ್ನು ಏಕಾಏಕಿಯಾಗಿ ಈ ತಿಂಗಳಿನಿಂದ ಬೆಳಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ವಿಸ್ತರಿಸಲಾಗಿದೆ.

ಕೇಂದ್ರದಲ್ಲಿ ಹೆಚ್ಚುವರಿ ಸಿಬಂದಿ ನೇಮಿಸಿ ಹಾಲಿ ಹಿರಿಯ ಸಿಬಂದಿಯನ್ನು ಅವಮಾನಿಸಲಾಗುತ್ತಿದೆ ಎಂದು ಸಿಬಂದಿ ವಿದ್ಯಾ ದೂರಿದರು.

ಕಾಣೆಯಲ್ಲಿದೂರು

ಯೋಗಿನಿ ಮಾತನಾಡಿ, ಸಣ್ಣ ಮಗು ಇರುವ ಕಾರಣ ಕೆಲಸದ ಅವಧಿಯನ್ನು ವಿಸ್ತರಿಸುವ ಬಗ್ಗೆ ತನಗೆ ವಿನಾಯಿತಿ ನೀಡಬೇಕೆಂದು ಕೋರಿ ಪತ್ರ ಬರೆದಿದ್ದೆ. ಆದರೆ ಇದಕ್ಕೆ ಸ್ಪಂದಿಸದೆ, ವಿಚಾರಿಸಿದ ನನ್ನ ತಂದೆ ಮೇಲೆ ಕದ್ರಿ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿಎಂಎಸ್ ಕಂಪ್ಯೂಟರ್ಸ್ ಅಧಿಕಾರಿಗಳ ವಿರುದ್ಧ ಮಹಿಳಾ ಸಿಬಂದಿ ಸೋಮವಾರ ಕದ್ರಿ ಮಂಗಳೂರು- ವನ್ ಕಚೇರಿ ಮುಂಭಾಗದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ವಿವಿಧ ಕೆಲಸ ಕಾರ್ಯಗಳಿಗೆ ಮಂಗಳೂರು ವನ್ ಕೇಂದ್ರಕ್ಕೆ ಬರುವ ಸಾರ್ವಜನಿಕರಿಗೆ ತೊಂದರೆ ಆಗಬಾರದೆಂದು ಇಂದು ಸಾಂಕೇತಿಕವಾಗಿ ಮೌನವಾಗಿ ಪ್ರತಿಭಟಿಸುತ್ತಿದ್ದೇವೆ. ನಮಗೆ ಆಗಿರುವ ಅನ್ಯಾಯ ಸರಿಪಡಿಸದಿದ್ದರೆ ಮುಂದೆ ಜಿಲ್ಲಾಧಿಕಾರಿ ಕಚೇರಿ ಎದುರು ತೀವ್ರ ಪ್ರತಿಭಟನೆ ನಡೆಸುವುದಾಗಿ ಪ್ರತಿಭಟನಕಾರರು ಎಚ್ಚರಿಸಿದರು.

ನೌಕರರ ಹಿತರಕ್ಷಣಾ ವೇದಿಕೆ, ಮಾನವ ಹಕ್ಕು ಮತ್ತು ಭ್ರಷ್ಟಾಚಾರ ವಿರೋಧಿ ಸಂಸ್ಥೆ ನಮ್ಮ ಮನೆ ನಮ್ಮ ಊರು, ಸಿಟಿಜನ್ ಫಾರಂ, ಪ್ರಜಾ ವಿಕಾಸ ಟ್ರಸ್ಟ್ ಸೆಹತ ವಿವಿಧ ಸಂಘ-ಸಂಸ್ಥೆಗಳು ಪ್ರತಿಭಟನೆಗೆ ಬೆಂಬಲ ಸೂಚಿಸಿವೆ.

ಪ್ರತಿಭಟನೆಯಲ್ಲಿ ನೌಕರರ ಹಿತ ರಕ್ಷಣಾ ವೇದಿಕೆ ಸಲಹೆಗಾರ ಬಿ.ಎನ್. ಚಂದ್ರು, ನಾಗರಿಕ ಪರವಾಗಿ ಚಿರಾಲ್ಡ್, ಮಾನವ ಹಕ್ಕು ಮತ್ತು ಭ್ರಷ್ಟಾಚಾರ ವಿರೋಧಿ ವೇದಿಕೆಯ ವಿಜಯ ನಾಯರ್ ಮೊದಲಾದವರು ಉಪಸ್ಥಿತರಿದ್ದರು.

ಬೊಕ್ಕಪಟ್ನ ಸ.ಪ.ಪೂ. ಕಾಲೇಜು: ನೂತನ ಕಟ್ಟಡ ಉದ್ಘಾಟನೆ

ಬೊಕ್ಕಪಟ್ನ ಸರಕಾರಿ ಪ.ಪೂ. ಕಾಲೇಜಿನಲ್ಲಿ ಆರ್‌ಎಂಎಸ್‌ಎ ಯೋಜನೆಯಡಿಯಲ್ಲಿ ನಿರ್ಮಾಣಗೊಂಡ ನೂತನ ಕಟ್ಟಡವನ್ನು ಅವರು ಉದ್ಘಾಟಿಸಿದರು.

ಬೊಕ್ಕಪಟ್ನ, ಆ. 29: ಸರಕಾರಿ ಶಾಲೆಗಳಿಗೆ ಹೆಚ್ಚಿನ ಸವಲತ್ತುಗಳನ್ನು ಸರಕಾರ ನೀಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಕಲಿಯುವ ಆಸಕ್ತಿ ಹೆಚ್ಚಾಗುತ್ತದೆ ಎಂದು ದ.ಕ. ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಕಸ್ತೂರಿ ಪಂಜ ಹೇಳಿದರು.

ನಗರದ ಬೊಕ್ಕಪಟ್ನ ಸರಕಾರಿ ಪ.ಪೂ. ಕಾಲೇಜಿನಲ್ಲಿ ಆರ್‌ಎಂಎಸ್‌ಎ ಯೋಜನೆಯಡಿಯಲ್ಲಿ ನಿರ್ಮಾಣಗೊಂಡ ನೂತನ ಕಟ್ಟಡವನ್ನು ಅವರು ಉದ್ಘಾಟಿಸಿದರು.

ಮಂಗಳೂರು ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಕೆ. ಎಲ್. ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ವ ಶಿಕ್ಷ ಅಭಿಯಾನದ ಮುಂದುವರಿದ ಭಾಗವಾಗಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರೌಢಶಾಲೆಗಳಿಗೆ ಹೊಸ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.

ಉತ್ತರ ವಲಯಕ್ಕೆ ಈಗಾಗಲೇ ಆರ್‌ಎಂಎಸ್‌ಎ ಯೋಜನೆಯಡಿಯಲ್ಲಿ 7 ಕಟ್ಟಡಗಳು ಮಂಜೂರಾಗಿವೆ. 3

ಗೋರಕ್ಷಣೆಯ ಹೆಸರಿನಲ್ಲಿ ಅರಾಜಕತೆ ಸೃಷ್ಟಿ: ಕುಂಞಿ

▶▶ ಜಿಲ್ಲಾಧಿಕಾರಿ ಕಚೇರಿ ಬಳಿ ವಿವಿಧ ಪಕ್ಷಗಳಿಂದ ಪ್ರತಿಭಟನೆ

ಪ್ರವೀಣ್ ಪೂಜಾರಿ ಹತ್ಯೆ, ದಲಿತ, ಅಲ್ಪಸಂಖ್ಯಾಕರ ಮೇಲಿನ ದಾಳಿ ಖಂಡಿಸಿ ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ದ.ಕ. ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ಜರಗಿತು.

ಸ್ಟೇಟ್‌ಬ್ಯಾಂಕ್, ಆ. 29: ಜಿಲ್ಲೆಯಲ್ಲಿ ಸಂಘಟನೆಗಳು ತಮ್ಮದೇ ಪಕ್ಷದ ಪ್ರವೀಣ್ ಗೋರಕ್ಷಣೆಯ ಹೆಸರಿನಲ್ಲಿ ಅರಾಜಕತೆ ಸೃಷ್ಟಿಯಾಗುತ್ತಿದೆ. ಹಿಂದೆ ಅಲ್ಪಸಂಖ್ಯಾಕರನ್ನು ಗುರಿಯಾಗಿಸಿಕೊಂಡು ದಾಳಿಗಳು ನಡೆಯುತ್ತಿದ್ದರೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಅನಂತರ ದಲಿತರ ಮೇಲೂ ದೌರ್ಜನ್ಯಗಳಾಗುತ್ತಿವೆ ಎಂದು ದ.ಕ. ಜಿಲ್ಲಾ ಜೆಡಿಎಸ್ ಜಿಲ್ಲಾಧ್ಯಕ್ಷ ಮಹಮ್ಮದ್ ಕುಂಞಿ ಆರೋಪಿಸಿದರು.

ಪ್ರವೀಣ್ ಪೂಜಾರಿ ಹತ್ಯೆ, ದೇಶಾದ್ಯಂತ ದಲಿತ, ಅಲ್ಪಸಂಖ್ಯಾಕರ ಮೇಲೆ ನಡೆಯುತ್ತಿರುವ ದಾಳಿ ಖಂಡಿಸಿ ದ.ಕ. ಜಿಲ್ಲಾ ಜಾತ್ಯತೀತ ಜನತಾ ದಳ, ಸಿಪಿಎಂ, ಸಿಪಿಐ ಮತ್ತು ದಲಿತ ಸಂಘರ್ಷ ಸಮಿತಿಯ (ಪೂಲಿ. ಕೃಷ್ಣಪ್ಪ ಸ್ಪಾಪಿತ) ಸಂಯುಕ್ತ ಆಶ್ರಯದಲ್ಲಿ ದ.ಕ. ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಮೂಡಬಿದಿರೆಯ ಪ್ರಶಾಂತ್ ಪೂಜಾರಿ ಹತ್ಯೆಯಾದಾಗ ಆಶಾಂತಿ ಸೃಷ್ಟಿಸಿದ ಹಿಂದೂ ಸಿಪಿಎಂ ಕಂಪ್ಯೂಟರ್ ಅಧಿಕಾರಿಗಳ ವಿರುದ್ಧ ಮಹಿಳಾ ಸಿಬಂದಿ ಸೋಮವಾರ ಕದ್ರಿ ಮಂಗಳೂರು- ವನ್ ಕಚೇರಿ ಮುಂಭಾಗದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಸಿಪಿಐ ಮುಖಂಡ ವಿ. ಕುಕ್ಯಾನ್ ಮಾತನಾಡಿ, ದೇಶದಲ್ಲಿ ಇತ್ತೀಚೆಗೆ ದಲಿತರ, ಅಲ್ಪಸಂಖ್ಯಾಕರ ಮೇಲಿನ ದೌರ್ಜನ್ಯ ಅಧಿಕವಾಗುತ್ತಿದೆ. ದಲಿತರು ಬದುಕಲು ಆತಂಕಪಡುವ ಪರಿಸ್ಥಿತಿ ಬಂದೊದಗಿದೆ ಎಂದು ಹೇಳಿದರು.

ಚಿಡಿಎಸ್ ರಾಮ್‌ಗಣೇಶ್, ವಸಂತ ಪೂಜಾರಿ, ಅಕ್ಷಿತ್ ಸುವರ್ಣ, ಗಂಗಾಧರ್ ಉಳ್ಳಾಲ, ರಹೀಮಾನ್ ಪುತ್ತೂರು, ಸಿಪಿಎಂನ ವಸಂತ ಪೂಜಾರಿ, ಬಾಲಕೃಷ್ಣ ಶೆಟ್ಟಿ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಸುನೀಲ್ ಕುಮಾರ್ ಬಜಾಲ್, ಸಿಪಿಐನ ಎಚ್.ಎ. ರಾವ್, ಕರುಣಾಕರ ಮತ್ತಿತರರು ಉಪಸ್ಥಿತರಿದ್ದರು.

1907ರಲ್ಲಿ ಮಂಗಳೂರಿಗೆ ರೈಲು ಸಂಪರ್ಕ ಕಲ್ಪಿಸಲಾಯಿತು

ಮಂಗಳೂರು ರೈಲು: 109 ವರ್ಷಗಳ ಸುದೀರ್ಘ ಇತಿಹಾಸ

□ಡಾ | ಸತ್ಯನಾರಾಯಣ ಮಲ್ಲಿಪಟ್ಟಣ

ಮದ್ರಾಸು ಆಧಿಪತ್ಯದಲ್ಲಿ 1870ರಲ್ಲಿ ಲಾರ್ಡ್ ಲಾರೆನ್ಸ್ ವೈಸರಾಯ್ ಆಗಿದ್ದ ಸಂದರ್ಭದಲ್ಲಿ ಹೊಸ ನಿಯಮಾವಳಿಯಲ್ಲಿ ರಾಜ್ಯ ರೈಲು ಸಂಪರ್ಕಕ್ಕೆ ಅದ್ಯತೆ ನೀಡಲಾಯಿತು.

ರೈಲು ದಾರಿಗಳ ನಿರ್ಮಾಣವನ್ನು ಆಗ ಜಾಯಂಟ್ ಸ್ಟಾಕ್ ಕಂಪೆನಿಗಳು ಪಡೆಸಿಕೊಂಡಿದ್ದವು. ಭಾರತದಲ್ಲಿ ಈ ಕಾರ್ಯಗ